# ಆ್ಯಕ್ಷನ್ ಪ್ರಿಯ ಪೃಥ್ವಿ




**ಈಚೆಗೆ** ಬಿಡುಗಡೆಯಾದ 'ಕೊತ್ತಲವಾಡಿ' ಸಿನಿಮಾದಲ್ಲಿ ತಮ್ಮ ಹಿಂದಿನ ಸಿನಿಮಾಗಳಿಗಿಂತ ಬೇರೆ ಗೆಟಪ್‌ನಲ್ಲಿ, ರಗಡ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ ನಟ ಪೃಥ್ವಿ ಅಂಬರ್. ಈ ರಗಡ್ ಪಾತ್ರವನ್ನೇ ತಾವು ನಿರೀಕ್ಷಿಸಿದ್ದಾಗಿಯೂ ಹೇಳಿಕೊಂಡಿದ್ದಾರೆ.

"ಇಂಥದ್ದೊಂದು ರೋಲ್ ಅನ್ನು ಬಹುಕಾಲದಿಂದ ನಿರೀಕ್ಷಿಸುತ್ತಿದ್ದೆ. ಪರಿಪೂರ್ಣವಾದ ಆ್ಯಕ್ಷನ್ ಪಾತ್ರ ನಿರ್ವಹಿಸಬೇಕು ಅಂದುಕೊಂಡಿದ್ದೆ. 'ಕೊತ್ತಲವಾಡಿ' ಸಿನಿಮಾ ಆ ನಿರೀಕ್ಷೆಯನ್ನು ಪೂರೈಸಿತು. ಆ್ಯಕ್ಷನ್, ಎಮೋಷನ್ ಹಾಗೂ ಪ್ರೀತಿ ಎಲ್ಲವನ್ನೂ ಈ ಸಿನಿಮಾ ಹಾಗೂ ನನ್ನ ಪಾತ್ರ ಒಳಗೊಂಡಿದೆ" ಎಂದು ಖುಷಿ ಹಂಚಿಕೊಂಡಿದ್ದಾರೆ.

'ಕೊತ್ತಲವಾಡಿ' ಸಿನಿಮಾದಲ್ಲಿ ಮೋಹನ ಎಂಬ ಪಾತ್ರದಲ್ಲಿ ಪೃಥ್ವಿ ಕಾಣಿಸಿಕೊಂಡಿದ್ದಾರೆ. ಭಾವನಾತ್ಮಕ ಹಾಗೂ ಸ್ಫೂರ್ತಿದಾಯಕ ಎರಡೂ ಮಿಳಿತಗೊಂಡ ಪಾತ್ರ ಇದಾಗಿತ್ತು ಎಂದು ವಿಮರ್ಶಿಸಿದ್ದಾರೆ. ಸಿನಿಮಾದಲ್ಲಿನ ಕೆಲವು ಸಂಗತಿಗಳನ್ನು ಹಂಚಿಕೊಂಡಿರುವ ಅವರು, 'ನಾನು ಮೂಲತಃ ಕರಾವಳಿಯವನಾದ್ದರಿಂದ ಚಾಮರಾಜನಗರ ಕನ್ನಡ ಮಾತಾಡುವುದು ಸವಾಲೇ ಆಗಿತ್ತು. ಎರಡೇ ದಿನದಲ್ಲಿ ನನಗೆ ಆ ಭಾಷೆಯ ಮೇಲೆ ಹಿಡಿತ ಸಿಕ್ಕಿತು. ಸ್ಥಳೀಯ ಕಥೆಯಿದ್ದ ಕಾರಣ ಆ ಭಾಷೆಯನ್ನು ಅಷ್ಟೇ ಚೆನ್ನಾಗಿ ನಿರೂಪಿಸಬೇಕಿತ್ತು' ಎಂದಿದ್ದಾರೆ.

ಸದ್ಯ ಪೃಥ್ವಿ ನಟನೆಯ 'ಚೌಕಿದಾರ್' ಸಿನಿಮಾ ಬಿಡುಗಡೆಗೆ ಸಿದ್ಧವಾಗಿದೆ. ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಅಮೆರಿಕಾ ಅಮೆರಿಕಾ 2' ಕೂಡ ಸರದಿಯಲ್ಲಿದೆ. 'ದಿಯಾ' ಸಿನಿಮಾ ನಿರ್ದೇಶಕರ ಜೊತೆ ಮತ್ತೊಂದು ಸಿನಿಮಾವನ್ನೂ ಕೈಗೆತ್ತಿಕೊಂಡಿದ್ದಾರೆ.

ನಟನೆಯೊಂದಿಗೆ ತುಳು ಭಾಷೆಯ ಸಿನಿಮಾ ನಿರ್ದೇಶನದಲ್ಲಿಯೂ ತೊಡಗಿಕೊಳ್ಳುತ್ತಿದ್ದಾರೆ ಪೃಥ್ವಿ.

'ತುಳು ಸಿನಿಮಾ ಕೆಲಸ ಬರವಣಿಗೆ ಹಂತದಲ್ಲಿದೆ. ಸಿನಿಮಾಗೆ ಗಟ್ಟಿ ಕಂಟೆಂಟ್ ನಿಜವಾದ ಹೀರೊ ಎಂದು ನಂಬಿದ್ದೇನೆ. ಶ್ರೀಪುರದಲ್ಲಿಯೇ ಶೂಟಿಂಗ್ ಆರಂಭವಾಗಲಿದೆ' ಎಂದು ಮಾಹಿತಿ ನೀಡಿದ್ದಾರೆ.

# ಮಾನ್ವಿತಾ ಹೊಸ ಪಥ



**ಒಟಿಟಿಯತ್ತ** ಚಿತ್ತ ಹರಿಸಿರುವ ನಟಿ ಮಾನ್ವಿತಾ, ವೆಬ್ ಸೀರೀಸ್‌ವೊಂದರಲ್ಲಿ ಅಭಿನಯಿಸುತ್ತಿದ್ದಾರೆ. ಇದೇ ಮೊದಲ ಬಾರಿಗೆ ವೆಬ್ ಸರಣಿಯಲ್ಲಿ ನಟಿಸುತ್ತಿದ್ದು, ಈ ಪ್ರಯೋಗದ ಕುರಿತು ಉತ್ಸುಕರಾಗಿರುವುದಾಗಿಯೂ ಹೇಳಿಕೊಂಡಿದ್ದಾರೆ.

"ಅಟೆನ್ಷನ್ ಸ್ಪ್ಯಾನ್ ಕಡಿಮೆಯಾಗುತ್ತಿರುವ ಈ ಹೊತ್ತಿನಲ್ಲಿ ಹೊಸ ಕಾಲದ ಪ್ರೇಕ್ಷಕರು ತಮ್ಮ ಮನೆಯಲ್ಲಿ ಕುಳಿತು, ತಮ್ಮ ಫೋನ್‌ನಲ್ಲಿಯೇ ಕಂಫರ್ಟ್ ಆಗಿ ಮನರಂಜನೆ ಪಡೆಯಲು ಹವಣಿಸುತ್ತಿದ್ದಾರೆ. 'ಹಾರಿಜಾಂಟಲ್ ವ್ಯೂಯಿಂಗ್' ಎನ್ನುವುದು ಬೇರೆಯದೇ ಮಾರುಕಟ್ಟೆ. ಬಿಂಜ್ ವಾಚಿಂಗ್ ಬಯಸುವವರಿಗಂತೂ ಇದು ಬಹಳ ಇಷ್ಟವಾಗುತ್ತದೆ. 'ವರ್ಟಿಕಲ್ ಕಂಟೆಂಟ್' ತನ್ನದೇ ಪ್ರೇಕ್ಷಕರನ್ನು ಹೊಂದಿದೆ. ಅದರಲ್ಲೂ ಫೋನ್ ಜೊತೆಗೇ ಯಾವಾಗಲೂ ಇರುವ ಈಗಿನ ಪೀಳಿಗೆಗೆ ಇದು ಉತ್ತಮ ಆಯ್ಕೆಯಾಗಿದೆ. ಎರಡೂ ಒಟ್ಟೊಟ್ಟಿಗೆ ಇರುವಂಥ ಮಾಧ್ಯಮವೇ" ಎಂದು ಒಟಿಟಿ ಕುರಿತ ತಮ್ಮ ಅನಿಸಿಕೆಯನ್ನು ಹಂಚಿಕೊಂಡಿದ್ದಾರೆ.

'ಸೀರೀಸ್ ನೋಡಲು ಜನರು ಸಬ್‌ಸ್ಕ್ರೈಬ್ ಮಾಡಬೇಕು. ಇದು ಸಿನಿಮಾಗೆ ಟಿಕೆಟ್ ಕೊಂಡುಕೊಂಡಂತೆಯೇ ಇರುತ್ತದೆ. ಸ್ಟ್ರೀಮಿಂಗ್ ಲೋಕದಲ್ಲಿ ಕನ್ನಡ ಸಿನಿಮಾಗಳು ನೆಲೆ ಕಂಡುಕೊಳ್ಳಬೇಕಿದೆ. ಪ್ರಾದೇಶಿಕ ಕಂಟೆಂಟ್‌ಗಳಲ್ಲಿ ಒಟಿಟಿಗಳು ಮುಂದಾಳತ್ವ ವಹಿಸಿವೆ. ಆದರೆ ನಾವು ಅವಕಾಶವನ್ನು ಅಷ್ಟು ಚೆನ್ನಾಗಿ ಬಳಸಿಕೊಂಡೆವು ಅನಿಸಲಿಲ್ಲ. ಗುಣಮಟ್ಟದ ಬಗ್ಗೆ ನಾವು ಗಮನ ಕೇಂದ್ರೀಕರಿಸಲಿಲ್ಲ. ವಿಷುವಲ್ ಆಗಿ ಮಾತ್ರವಲ್ಲ, ಕಂಟೆಂಟ್ ಕೂಡ ಬಹಳ ಮುಖ್ಯ' ಎಂದು ವಿವರಣೆ ನೀಡಿದ್ದಾರೆ.

ಒಟಿಟಿಯಲ್ಲಿ ಮಲೆಯಾಳಂ ಸಿನಿಮಾಗಳ ಗೆಲುವಿನ ಕುರಿತು ಮಾತನಾಡಿರುವ ಅವರು, 'ಮಲೆಯಾಳಂ ಸಿನಿಮಾರಂಗ ಜಾಗತಿಕ ಮಟ್ಟದಲ್ಲಿ ಹೆಸರು ಮಾಡುತ್ತಿದೆ, ಏಕೆಂದರೆ ಅವು ಸಾಂಸ್ಕೃತಿಕವಾಗಿ ಹಾಗೂ ಪ್ರಾದೇಶಿಕವಾಗಿ ಇರುತ್ತವೆ. ಕರ್ನಾಟಕ ಕೂಡ ಸಂಸ್ಕೃತಿಯಲ್ಲಿ ಶ್ರೀಮಂತವಾಗಿದೆ. ಸಿನಿಮಾ ಆಗಲು ಕಾಯುತ್ತಿರುವ ಸಾಕಷ್ಟು ಕಥೆಗಳು ಇಲ್ಲಿವೆ. ಅವನ್ನು ಸಂಶೋಧನೆ ಮಾಡಿ ಪ್ರಯೋಗ ಮಾಡಬೇಕಷ್ಟೆ' ಎಂದು ಅನಿಸಿಕೆ ವ್ಯಕ್ತಪಡಿಸಿದ್ದಾರೆ. ■